ಅ) ಕಳೆದ ಹತ್ತು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಪದವಿ ಪೂರ್ವ ವೃತ್ತಿ ಶಿಕ್ಷಕರನ್ನು ಖಾಯಂ ಮಾಡಲಾಗುವುದೆಂದು ಸರ್ಕಾರ ಫೆಬ್ರವರಿ 96 ರಲ್ಲಿ ಈ ಸದನದಲ್ಲಿ ಲಿಖಿತ ಭರವಸೆ ನೀಡಿದ್ದು ನಿಜವೇ

ಆ) ಹಾಗಿದ್ದಲ್ಲಿ ಭರವಸೆ ಈಡೇರಿಸಲು ಸರ್ಕಾರ ತೆಗೆದು ಕೊಂಡ ಕ್ರಮಗಳೇನು

ಇ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು

ಈ) ಇದೇ ಬೇಡಿಕೆಯನ್ನು ಮುಂದಿಟ್ಟ ಪದವಿ ಪೂರ್ವ ವೃತ್ತಿ ಶಿಕ್ಷಣ ಸಂಘದವರು ಕಳೆದ 75 ದಿನಗಳಿಂದ ಸತ್ಯಾಗ್ರಹ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಉ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಳ್ಳಲುದ್ದೇಶಿಸಿರುವ ಕ್ರಮಗಳು ಯಾವವು?

ಶ್ರೀ ಆರ್.ಕೃಷ್ಣಪ್ಪ (ವಯಸ್ಕರ ಶಿಕ್ಷಣ ಹಾಗೂ ಗ್ರಂಥಾಲಯ ರಾಜ್ಯ ಸಚಿವರು) :

ಅ,ಆ,ಇ) ಪದವಿ ಪೂರ್ವ ವೃತ್ತಿ ಶಿಕ್ಷಣ ಇಲಾಖೆಯ ತಾತ್ಕಾಲಿಕ ಸಿಬ್ಬಂದಿಯನ್ನು ಖಾಯಂ ಮಾಡುವ ಬಗ್ಗೆ ಹಲವಾರು ಭಾರಿ ವಿಧಾನ ಸಭೆ ಪರಿಷತ್ತಿನ ಸದನಗಳಲ್ಲಿ ಮಾನ್ಯ ಸದಸ್ಯರುಗಳು ಪ್ರಸ್ತಾಪಿಸಿದ್ದು ಸರ್ಕಾರವು ಖಾಯಂ ಮಾಡುವ ವಿಚಾರವನ್ನು ಪರಿಶೀಲಿಸಲಾಗುವುದೆಂದು ಭರವಸೆ ನೀಡಿದ್ದಿತು. ಈ ವಿಚಾರವನ್ನು ಸಮಗ್ರವಾಗಿ ಪರಿಶೀಲನೆ ಮಾಡಲಾಗಿ ಈ ಸಿಬ್ಬಂದಿಯವರು ಮಂಜೂರಾದ ಹುದ್ದೆಗಳಲ್ಲಿ ಕೆಲಸ ಮಾಡುತ್ತಿಲ್ಲವಾದ್ದರಿಂದಲೂ ಹಾಗೂ ಇವರ ಸೇವೆಯನ್ನು ಸಕ್ರಮಗೊಳಿಸಿದುದೇ ಆದಲ್ಲಿ ಇತರ ಇಲಾಖೆಗಳಲ್ಲಿ ತಾತ್ಕಾಲಿಕವಾಗಿ ಸೇವೆ ಸಲ್ಲಿಸುತ್ತಿರುವ ಇಂತಹ ಸಹಸ್ರಾರು ನೌಕರರ ಸೇವೆಯನ್ನು ಸಕ್ರಮಗೊಳಿಸುವ ಅನಿವಾರ್ಯತೆ ಉಂಟಾಗುತ್ತದೆ. ಅಲ್ಲದೆ ಈ ಸಿಬ್ಬಂದಿಯನ್ನು ಸಕ್ರಮಗೊಳಿಸುವುದು ನೇಮಕಾತಿ ನಿಯಮಗಳ ಉದ್ದೇಶಗಳ ಉಲ್ಲಂಘನೆಯಾಗುವುದೇ ಅಲ್ಲದೆ ನಿಗದಿತ ಪದ್ಧತಿ ಮತ್ತು ನಿಯಮ ಪಾಲಿಸದೆ ಮಾಡಿಕೊಂಡ ನೇಮಕಾತಿಗಳು ನಿಯಮ ಬಾಹಿರವೆಂದು ಇತೀಚಿನ ತೀರ್ಪುಗಳಲ್ಲಿ ನ್ಯಾಯಾಲಯಗಳು ತಿಳಿಸಿವೆ. ಈ ಹಿನ್ನೆಲೆಯಲ್ಲಿ ಇವರ ಸೇವೆಯನ್ನು ಸಕ್ರಮಗೊಳಿಸುವುದು ಸಾಧ್ಯವಿಲ್ಲವೆಂದು ಸರ್ಕಾರ ನಿರ್ಧರಿಸಿದೆ.

ಈ) ಹೌದು.

ಉ) ಕಂಡಿಕೆ ಅ, ಆ ಮತ್ತು ಇ ಉತ್ತರದಿಂದ ಉದ್ಭವಿಸುವುದಿಲ್ಲ

ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ

ಉ) ಕಂಡಿರೆ ಅ, ಆ ಮತ್ತು ಇ ಉತ್ತರದಿಂದ ಉದ್ಭವಿಸುವುದಿಲ್ಲ

1027 (1422)

ಶ್ರೀ ಎಸ್.ವಿ. ರವೀಂದ್ರನಾಥ್ (ಮಾಯಗೊಂಡ) : ಮಾನ್ಯಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) 1998-99ನೇ ಸಾಲಿನಲ್ಲಿ ರಾಜ್ಯದಲ್ಲಿ ಕೊರೆಯಲಾದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು? ಹಾಗೂ ಇವುಗಳಲ್ಲಿ ವಿದ್ಯುತ್ ಸಂಪರ್ಕ ನೀಡಲಾದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು?

ಆ) ದಾವಣಗೆರೆ ಜಿಲ್ಲೆಯಲ್ಲಿ ಕೊರೆದಿರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು?

ಇ) ಅವುಗಳ ಪೈಕಿ ವಿದ್ಯುತ್ ಸಂಪರ್ಕ ಒದಗಿಸಲಾದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು?

ಈ) ಇನ್ನೂ ವಿದ್ಯುತ್ ಸಂಪರ್ಕ ಒದಗಿಸಬೇಕಾದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮಿಣಾಭಿವೃದ್ದಿ ಮತ್ತು ಪಂ.ರಾಜ್ ಸಚಿವರು) :

ಅ) 1998-99ನೇ ಸಾಲಿನಲ್ಲಿ (ಫೆಬ್ರವರಿ 99 ರ ಅಂತ್ಯಕ್ಕೆ) ಒಟ್ಟು 5396 ಕೊಳವೆ ಬಾವಿಗಳನ್ನು ಕೈಪಂಪು ಮತ್ತು ನೀರು ಸರಬರಾಜು ಯೋಜನೆಗೆಂದು ಕೊರೆಯಲಾಗಿದೆ. ಇವುಗಳಲ್ಲಿ 659 ನೀರು ಸರಬರಾಜು ಯೋಜನೆಗೆಂದು ಕೊರೆಯಲಾದ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.

ಆ) 1998-99 ನೇ ಸಾಲಿನಲ್ಲಿ ದಾವಣಗೆರೆ ಜಿಲ್ಲೆಯಲ್ಲಿ ಒಟ್ಟು 247 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ.

ಇ) ನೀರು ಸರಾಬರಾಜು ಯೋಜನೆಗಳಿಗೆಂದು ಕೊರೆಯಲಾದ 99 ಕೊಳವೆ ಬಾವಿಗಳಲ್ಲಿ 33 ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.

ಈ) 66 ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಬೆಕಾಗಿದೆ.

ಬಿಜಾಪುರ ಜಿಲ್ಲಾ ಆಸ್ಪತ್ರೆಯನ್ನು ಕೆಹೆಚ್ಎಸ್ಡಿಪಿಯವರಿಗೆ ವಹಿಸುವುದು

1028 (1484)

ಶ್ರೀ ಪಾಟೀಲ್ ಶಿವಾನಂದ ಸಿದ್ರಾಮಪ್ಪ (ತಿಕೋಟ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ವಿಜಾಪುರ ಜಿಲ್ಲಾ ಆಸ್ಪತ್ರೆಯನ್ನು ಅಭಿವೃದ್ದಿ ಸಲುವಾಗಿ ಕೆಹಚ್ಎಸ್ಡಿಪಿಯವರಿಗೆ ವಹಿಸಿ ಕೊಟ್ಟಿರುವ ದಿನಾಂಕ ಯಾವುದು?

ಆ) ಅದನ್ನು ನಿರ್ವಹಿಸಿಕೊಂಡ ಮೇಲೆ ಇಲ್ಲಿಯವರೆಗೆ ಅವರು ಕೈಗೊಂಡಿರುವ ಅಭಿವೃದ್ದಿ ಕಾರ್ಯಗಳು ಯಾವುವು (ವಿವರ ಮಾಹಿತಿ ಒದಗಿಸುವುದು)

ಇ) ಸದರಿ ಯೋಜನೆಯಡಿ ಕೈಗೊಂಡ ಅಭಿವೃದ್ದಿ ಕಾಮಗಾರಿಗಳ ಮೊತ್ತವೆಷ್ಟು ಮತ್ತು ಯಾವ ಯಾವ ಕಾಮಗಾರಿಗಳು ಯಾವಾಗ ಪೂರ್ಣವಾಗುತ್ತದೆ?

ಡಾ॥ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಕರ್ನಾಟಕ ಆರೋಗ್ಯ ಪದ್ಧತಿಗಳ ಅಭಿವೃದ್ದಿ ಯೋಜನೆಯು ಜೂನ್ 1996 ರಲ್ಲಿ ಪ್ರಾರಂಭವಾದಾಗಿನಿಂದ ಯೋಜನೆಯ ವಿವಿಧ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ವಿಜಾಪುರ ಜಿಲ್ಲಾ ಆಸ್ಪತ್ರೆಯು ಸೇರ್ಪಡೆಯಾಗಿದೆ. ಆದರೆ ಹಾಲಿ ಇರುವ ಕಟ್ಟಡಗಳ ನವೀಕರಣ ಹಾಗೂ ಹೊಸ ಕಟ್ಟಡಗಳ ನಿರ್ಮಾಣಕ್ಕಾಗಿ ಟೆಂಡರುಗಳು ಅನುಮೋದನೆಯಾದ ನಂತರ ಆಸ್ಪತ್ರೆಯನ್ನು ಕೆಹೆಚ್ಎಸ್ಡಿಪಿಯ ವಶಕ್ಕೆ ತೆಗೆದುಕೊಂಡು ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಆ) ವಿಶ್ವಬ್ಯಾಂಕ್ ನಿಯಮಗಳಡಿ ನಿಗದಿಪಡಿಸಿರುವ ರೀತ್ಯ ವೈದ್ಯಕೀಯ ಹಾಗೂ ಇತರೆ